# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೊಡಗು ಜಿಲ್ಲೆ, ಮಡಿಕೇರಿ.

ಉಪಸ್ಥಿತರು: ಮೀರ್ ಅನೀಸ್ ಅಹಮದ್ ಭಾ.ಆ.ಸೇ,
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ.

ನಂ:ರೆ.ಅ/ರಿವಿಜನ್/08/2013-14

ದಿನಾಂಕ:02-05-2016

ವಾದಿಗಳು

ಶ್ರೀ ಕೆ.ಎಂ. ಅಬ್ದುಲ್ ಖಾದರ್,
ನೆಲ್ಲಿಹುದಿಕೇರಿ ಗ್ರಾಮ,
ಸೋಮವಾರಪೇಟೆ ತಾಲ್ಲೂಕು.

ಪ್ರತಿವಾದಿಗಳು

ತಹಶೀಲ್ದಾರ್,
ಸೋಮವಾರಪೇಟೆ ತಾಲ್ಲೂಕು.

ದಾವಾ ಜಮೀನು: ಸೋಮವಾರಪೇಟೆ ತಾಲ್ಲೂಕು, 7ನೇ ಹೊಸಕೋಟೆ ಗ್ರಾಮದ ಸ.ನಂ. 10/2ರ 0.25 ಎಕರೆ ಹಾಗೂ ಅತ್ತೂರು ನಲ್ಲೂರು ಗ್ರಾಮದ ಸ.ನಂ. 203ರ 1.67 ಎಕರೆ.

*-*-*-*

ಪ್ರಸ್ತಾವನೆ:

ಮೇಲ್ಮನವಿದಾರರು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 122 ಬಿ ರಡಿ ದಿನಾಂಕ: 06-11-2013ರಂದು ಸಲ್ಲಿಸಿ ಪ್ರತಿವಾದಿಗಳ ಆದೇಶ (ಹಿಂಬರಹ) ಸಂಖ್ಯೆ:ಟಿಎಸ್‌ಟಿ:ಕಂ.ನಿ:144: 2012-13, ದಿನಾಂಕ:11-02-2013ನ್ನು ಪ್ರಶ್ನಿಸಿದ್ದು, ಸದರಿ ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ಮೇಲ್ಮನವಿದಾರರಿಗೆ ನೋಟೀಸು ನೀಡಿ ವಾದ ಮಂಡನೆಗೆ ಅವಕಾಶ ಕೊಟ್ಟು ವಿಚಾರಣೆಗೆ ಒಳಪಡಿಸಲಾಯಿತು.

ಮೇಲ್ಮನವಿದಾರರ ಪರ ವಕೀಲರು ದಿನಾಂಕ:23-06-2014ರಂದು ವಿಚಾರಣೆಗೆ ಹಾಜರಾಗಿ ವಾದ ಮಂಡಿಸಿದ್ದು, ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

1. ಮೇಲ್ಮನವಿದಾರರು ದಾವಾ ಜಮೀನಿನ ಹಕ್ಕು ಮತ್ತು ಸ್ವಾಧೀನ ಹೊಂದಿದ್ದು, ಸದರಿ ಜಮೀನಿನಲ್ಲಿ ಬಹಳ ಹಿಂದಿನಿಂದಲೂ ಕಾಫಿ ಬೇಸಾಯ ಮಾಡುತ್ತಿದ್ದಾರೆ.
2. ದಾವಾ ಜಮೀನಿನ ಆರ್‌ಟಿಸಿಯಂತೆ ಸಾಗು ಎಂದಿದ್ದು, ಖುಷ್ಕಿ ಜಮೀನಾಗಿ ನಮೂದಾಗಿರುತ್ತದೆ. ಆದರೆ ಮೇಲ್ಮನವಿದಾರರು ಕಾಫಿ ಬೇಸಾಯ ಮಾಡುತ್ತಿದ್ದು, ಕಾಫಿ ಕೃಷಿ ಇರುವ ಬಗ್ಗೆ ತಹಶೀಲ್ದಾರರು 1998ರಲ್ಲಿಯೇ ಮೇಲ್ಮನವಿದಾರರಿಗೆ ದಾವಾ ಜಮೀನೂ ಒಳಗೊಂಡಂತೆ ಇನ್ನಿತರ ಜಮೀನಿಗೆ ಕಾಫಿ ನೋಂದಣಿ ದೃಢೀಕರಣ ಪತ್ರ (ಸಿಆರ್‌ಸಿ)ವನ್ನು ನೀಡಿರುತ್ತಾರೆ. ಆರ್‌ಟಿಸಿಯಲ್ಲೂ ಸಹ ಬೇಸಾಯದ ವಿವರ ಕಾಫಿ ಎಂದಿರುತ್ತದೆ.
3. ಸದರಿ ಜಮೀನಿನ ಕಂದಾಯ ದರವು ಆರ್‌ಟಿಸಿ ಮತ್ತು ಆಕಾರಬಂದಿನಂತೆ ತರಿ ಬಾಬಿನಲ್ಲಿ ದಾಖಲಾಗಿರುವುದು ಇತ್ತೀಚೆಗೆ ಮೇಲ್ಮನವಿದಾರರ ಗಮನಕ್ಕೆ ಬಂದ ಮೇರೆ, ಕಾಫಿ ಕೃಷಿಯ ಬಗ್ಗೆ ಕಂದಾಯ ದರವನ್ನು ಮರು ನಿಗಧಿಪಡಿಸಿಕೊಂಡಿರುವಂತೆ ಪ್ರತಿವಾದಿಗಳಿಗೆ ಅರ್ಜಿ ಸಲ್ಲಿಸಲಾಗಿ, ಸದರಿಯವರು ದಾವಾ ಜಮೀನಿಗೆ ಕಂದಾಯ ನಿಗಧಿಪಡಿಸಲು ರಹಾ ಇರುವುದಿಲ್ಲ. ಈ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸುವಂತೆ ತಿಳಿಸಿ ಪ್ರಶ್ನಿತ ಆದೇಶದಂತೆ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ.

4. ಆದರೆ ಇಂಥಹ ಆದೇಶ ನೀಡಲು ಕರ್ನಾಟಕ ಭೂಕಂದಾಯ ಕಾಯ್ದೆಯಡಿಯಲ್ಲಿ ಉಪವಿಭಾಗಾಧಿಕಾರಿಯವರಿಗೆ ಅಧಿಕಾರ ಇಲ್ಲದ್ದರಿಂದ ಈ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಆದುದರಿಂದ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮೇಲ್ಮನವಿಯನ್ನು ಅಂಗೀಕರಿಸಿ ದಾವಾ ಜಮೀನಿಗೆ ಪ್ಲಾಂಟೇಶನ್ ದರದಲ್ಲಿ ಕಂದಾಯ ನಿಗಧಿಸಿ ಕೊಡುವಂತೆ ಕೋರಿರುತ್ತಾರೆ.

ಮೇಲ್ಮನವಿಯ ಅಂಶ, ವಾದ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ದಾವಾ ಜಮೀನಿನ ಆರ್‌ಟಿಸಿ ಪರಿಶೀಲಿಸಲಾಗಿ ಖಾತೆಯು ಅರ್ಜಿದಾರರ ಹೆಸರಿನಲ್ಲಿದ್ದು, ಸಾಗು ನಿಬಂಧನೆಗೆ ಒಳಪಟ್ಟಿದ್ದು, ಆರ್‌ಟಿಸಿಯ 12 (9)ನೇ ಕಾಲಂನಲ್ಲಿ ಬೇಸಾಯ ಕಾಫಿ ಎಂದಿದ್ದು, ಪ್ಲಾಂಟೇಶನ್ ಎಂದು ನಮೂದಾಗಿರುತ್ತದೆ. ಮೇಲ್ಮನವಿದಾರರು ಸದರಿ ಜಮೀನನ್ನು ಈ ಹಿಂದೆಯೇ ಕಾಫಿ ಬೇಸಾಯಕ್ಕೆ ಒಳಪಡಿಸಿದ ಬಗ್ಗೆ ಪ್ರತಿವಾದಿಗಳು ದಿನಾಂಕ:31-08-1998ರಂದು ಸಿಆರ್‌ಸಿ ನೀಡಿರುವುದು ಹಾಜರುಪಡಿಸಿದ ದಾಖಲೆಗಳಿಂದ ಕಂಡು ಬಂದಿರುತ್ತದೆ. ಆದರೆ ಜಮೀನಿನ ಆರ್‌ಟಿಸಿಯಂತೆ ಕಂದಾಯ ದರವು ಖುಷ್ಕಿ ಬಾಬಿನಲ್ಲಿರುತ್ತದೆ. ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 122 ಬಿ (II)ರಂತೆ ಈಗಾಗಲೇ ನಿಗಧಿಸಿರುವ ಕಂದಾಯವನ್ನು ಪರಿಷ್ಕರಿಸಿ ಮರು ನಿಗಧಿಸಲು ಜಿಲ್ಲಾಧಿಕಾರಿಯವರಿಗೆ ಅಧಿಕಾರ ವ್ಯಾಪ್ತಿ ಇದ್ದು, ಆರ್‌ಟಿಸಿಯಲ್ಲಿನ ಬೆಳೆ ವಿವರ ಹಾಗೂ ತಹಶೀಲ್ದಾರರು ನೀಡಿರುವ ಕಾಫಿ ನೋಂದಣಿ ದೃಢೀಕರಣ ಪತ್ರದಿಂದ ದಾವಾ ಜಮೀನು 1998ರಿಂದಲೇ ಕಾಫಿ ಸಾಗುವಳಿಗೆ ಒಳಪಟ್ಟಿರುವುದು ದೃಢಪಟ್ಟಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮೇಲ್ಮನವಿಯನ್ನು ಅಂಗೀಕರಿಸಿ ದಾವಾ ಜಮೀನಿಗೆ ಪ್ಲಾಂಟೇಶನ್ ದರದಲ್ಲಿ ಕಂದಾಯ ನಿಗಧಿಸಿ ಆದೇಶಿಸಿದೆ. ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು ರವರು ಈ ಆದೇಶದಂತೆ ಅಗತ್ಯ ಕ್ರಮ ಜರುಗಿಸುವುದು.

ಈ ಆದೇಶವನ್ನು ದಿನಾಂಕ:02-05-2016ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.